

ಭಾವು ಪತ್ತಾರ

ಮಧ್ಯಾಹ್ನ ಯುಜಿಸಿ ಶೈಕ್ಷಣಿಕ ಕಾರ್ಯಕ್ರಮ. ದೂರದರ್ಶನದಲ್ಲಿ, ಇರುವಷ್ಟು ಸಮಯದಲ್ಲಿಯೇ ಎಲ್ಲಾ ವಯೋಮಾನದವರ ಅಗತ್ಯಗಳಿಗೆ ತಕ್ಕ ಕಾರ್ಯಕ್ರಮಗಳು ಬರುತ್ತಿದ್ದವು. ಮಕ್ಕಳಿಗಾಗಿಯೇ ಮೀಸಲಾದ ಕಾರ್ಯಕ್ರಮಗಳೂ ಇದ್ದವು. ಅವಷ್ಟೆ ಸಾಮಾನ್ಯವಾಗಿ ನಾವು ನೋಡುತ್ತಿದ್ದುದು. ಹೀಗಾಗಿ ವಾರದಲ್ಲಿ ಎರಡೋ ಮೂರೋ ಬಾರಿ, ಒಂದರ್ಧ ಗಂಟೆ. ಚಿತ್ರಹಾರ್, ಶನಿವಾರದ ಕನ್ನಡ ಸಿನಿಮಾ, ಭಾನುವಾರದ ಹಿಂದಿ ಸಿನಿಮಾ ಇವುಗಳಿಗೆ ವಿಶೇಷ ರಿಯಾಯಿತಿ. ಮಕ್ಕಳೂ ನೋಡಬಹುದಾಗಿತ್ತು. ಮಕ್ಕಳೂ ನೋಡುವ ಹಾಗೆ ಅವು ಇದ್ದವೂ ಕೂಡ.

ರಾಮಾನಂದ್ ಸಾಗರ್ ಅವರ ರಾಮಾಯಣ ಸೀರಿಯಲ್ ಆಗ ಬಹಳ ಪ್ರಸಿದ್ಧವಿತ್ತು. ಅದನ್ನೂ ನಾವು ತಪ್ಪದೇ ನೋಡುತ್ತಿದ್ದೆವು. ನಾವು ಒಮ್ಮೆ ಮೈಸೂರಿಗೆ ಹೋಗಿದ್ದಾಗಿನ ಘಟನೆ ನೆನಪಿಗೆ ಬರುತ್ತದೆ. ಮೊಹಸಿನಾ ಎಂಬ ನಮ್ಮ ಒಬ್ಬ ಚಿಕ್ಕಮ್ಮ ಮೈಸೂರಿನ ಮಂಡಿ ಮೊಹಲ್ಲಾದಲ್ಲಿದ್ದರು. ಬಹಳ ಶ್ರದ್ಧಾವಂತ ಮುಸ್ಲಿಮರು. ಅವರ ಮನೆಗೆ ಹೋಗಿದ್ದ ಭಾನುವಾರ ರಾಮಾಯಣ ನೋಡುವುದು ತಪ್ಪುತ್ತದಲ್ಲಾ ಎಂಬುದು ನಮ್ಮ ಚಿಂತೆಯಾಗಿತ್ತು. ಆದರೆ ನಮಗೊಂದು ಅಚ್ಚರಿ ಕಾದಿತ್ತು. ನಮ್ಮ ಚಿಕ್ಕಮ್ಮ, ರಾಮಾಯಣ ಪ್ರಸಾರದ ಸಮಯಕ್ಕಿಂತ ಮುಂಚೆ ತಮ್ಮ ಕೆಲಸವನ್ನೆಲ್ಲಾ ಮುಗಿಸಿಕೊಂಡು, ಹಾಲಿನಲ್ಲಿ ಮಕ್ಕಳಿಗಾಗಿ ಜಮಖಾನ ಹಾಸಿ, ದೊಡ್ಡವರಿಗೆ ಇದ್ದಷ್ಟು ಚೇರುಗಳನ್ನು ಜೋಡಿಸಿಟ್ಟರು. ನೆರೆಹೊರೆಯ ಮಕ್ಕಳು, ಮಹಿಳೆಯರು, ಮುದುಕರು ಎಲ್ಲರೂ (ಮುಸಲ್ಮಾನರೇ) ಚಿಕ್ಕಮ್ಮನ ಮನೆಯಲ್ಲಿ ರಾಮಾಯಣವನ್ನು ನೋಡಲು ಸೇರಿದ್ದರು. ಟಿವಿ ಎಂದರೆ ಸಮಾಜದಲ್ಲಿ ಮಾಹಿತಿ, ಶಿಕ್ಷಣ, ರಂಜನೆಯ ಜೊತೆಗೆ ಸೌಹಾರ್ದವನ್ನು ಬಿತ್ತಿ ಬೆಳೆಸುತ್ತಿದ್ದ ಕಾಲವದು.

ನಾವು ಬೆಳೆದು ಕಾಲೇಜು, ನೌಕರಿ ಮಾಡಲು ತೊಡಗುವ ಹೊತ್ತಿಗೆ ಟಿವಿಯಲ್ಲಿ ಹಲವಾರು ಭಾಷೆಯ ಹತ್ತಾರು ಚಾನಲುಗಳ ದಾಳಿ ಆಗಲೇ